ಸಿನಿಮಾ ತಾರೆಯರಿಗೆ ಕೊಡುವಷ್ಟೇ ಸ್ವೇಚ್ಛೆಯನ್ನು ಸಾಮಾನ್ಯರಿಗೂ ಕೊಟ್ಟಿವೆ. ಇಲ್ಲಿ ಎಲ್ಲರೂ ತಾರೆಯರೇ! ಹಾಗಾಗಿ ಸೆಲ್ಫೀಗಳನ್ನು ಜನ ದಿನನಿತ್ಯ ಎಲ್ಲ ಸಂದರ್ಭಗಳಲ್ಲಿ ಅಂದರೆ ತಿನ್ನುವಾಗ, ಉಣ್ಣುವಾಗ, ಅತಿಥಿಗಳು ಬಂದಾಗ, ಪ್ರವಾಸ ಹೋದಾಗ, ವಿಶೇಷ ಸಂದರ್ಭಗಳಲ್ಲಿ, ಹೊಸವರ್ಷ, ಹುಟ್ಟಿದಹಬ್ಬ, ಕಾಲೇಜು ದಿನಗಳಲ್ಲಿ, ಅವರು ಮಾಡಿದ ಉತ್ತಮ ಕೆಲಸಗಳ ಪ್ರಚಾರಕ್ಕಾಗಿ– ಹೀಗೆ ಇನ್ನಿಲ್ಲದಂತೆ ತೆಗೆದುಕೊಳ್ಳುವ ಕೆಲಸದಲ್ಲಿ ತೊಡಗಿದ್ದಾರೆ.



## ಸೆಲ್ಫೀಗಳ ಸೈಕಾಲಜಿ

ಸೆಲ್ಫೀಗಳ ಹಿಂದಿನ ಮಾನಸಿಕ ಸ್ಥಿತಿಯನ್ನು ಮನೋ ತಜ್ಞರು 3 ರೀತಿಯಲ್ಲಿ ನೋಡುತ್ತಾರೆ.

1. ತಮ್ಮತನವನ್ನು ವಿಜೃಂಬಿಸಿ ನೋಡಿಕೊಳ್ಳುವ ಮನುಷ್ಯನ ದೌರ್ಬಲ್ಯ ಅಥವಾ ಆಸೆ. ಇದು ಅವನ ವೈಯಕ್ತಿಕವಾಗಿ ಮಾತ್ರ ಕೇಂದ್ರೀಕೃತವಾಗಿರುವ ದೃಷ್ಟಿಕೋನವನ್ನು ಸೂಚಿಸುವಂತದ್ದು. ಸೆಲ್ಫಿ ತೆಗೆದುಕೊಳ್ಳುವ ಜನರಿಗೆ ತಮ್ಮನ್ನು ತಾವು ಮೆರೆಸಿಕೊಳ್ಳುವ ಮಾನಸಿಕ ಅಗತ್ಯಗಳಿರುತ್ತವೆ.

2. ಥಟ್ಟಂತ ದುಡುಕುವ ಸ್ವಭಾವ. ಇವರಲ್ಲಿ ಇನ್ನೊಬ್ಬರನ್ನು ಅರ್ಥ ಮಾಡಿಕೊಳ್ಳುವ ಸ್ವಭಾವದ ಲೋಪವಿರುವುದು. ಇವರಲ್ಲಿ ನೀತಿಯುತ ನಡವಳಿಕೆಗಳೂ ಕಡಿಮೆ ಇದೆ ಎನ್ನುತ್ತಾರೆ.

3. ತಮ್ಮ ದೇಹವನ್ನು ಅದರ ಲೈಂಗಿಕ ಮೌಲ್ಯಕ್ಕೆ ಅನುಸಾರವಾಗಿ ಅಳೆಯುವ ಗುಣ. ಇವರಲ್ಲಿ ತಮ್ಮ ದೇಹವನ್ನು ಆತ್ಮದ ಹೊರತಾಗಿ ಒಂದು ಸಾಧನವನ್ನಾಗಿ ನೋಡುವ ಗುಣಗಳಿರುತ್ತವೆ. ಇದೇ ಕಾರಣಕ್ಕೆ ಇತರರ ಮೌಲ್ಯವನ್ನು ಕೂಡ ಇದೇ ಆಧಾರದ ಮೆಲೆ ನೋಡುವ ಗುಣವನ್ನು ಹೊಂದಿರುತ್ತಾರೆ. ಸಮಯ ಸಿಕ್ಕಾಗಲೆಲ್ಲಾ 'ನಾನು ನಿನಗಿಂತ ಉತ್ತಮ ಎಂದು ಸಾಧಿಸಿ ತೋರಿಸುವ ಅಥವಾ ತಾನು ಮಹಾನ್ ಎಂದು ತನಗೆ ತಾನೇ ಭರವಸೆ ಕೊಟ್ಟು ಕೊಳ್ಳುವ ಪ್ರವೃತ್ತಿಯಲ್ಲಿ ತೊಡಗಿರುವ ಜನ.

18–40 ವಯಸ್ಸಿನ ಜನರನ್ನು ಸಂಶೋಧನೆಗೆ ಒಳಪಡಿಸಿ ಅವರು ಸೆಲ್ಫೀಗಳನ್ನು ತೆಗೆದುಕೊಳ್ಳಲು ಬಳಸಿದ ಸಮಯ, ಪಟ್ಟ ಶ್ರಮ, ಅದರ ನಂತರ ಅದನ್ನು ಎಡಿಟ್ ಮಾಡಲು, ಕ್ರಾಪ್ ಮಾಡಲು, ರಿ ಟಚ್ ಮಾಡಲು ಪಟ್ಟ ಪ್ರಯತ್ನ ಮತ್ತು ಅದನ್ನು ಸಾಮಾಜಿಕ ಸಮೂಹ ಮಧ್ಯಮಗಳಲ್ಲಿ ಪೋಸ್ಟ್ ಮಾಡಲು ಪಟ್ಟ ಪ್ರಯತ್ನದ ಆಧಾರದ ಮೇಲೆ ಈ ಮೇಲಿನ ಫಲಿತಾಂಶವನ್ನು ಪಡೆಯಲಾಗಿದೆ.

ಇತ್ತೀಚೆಗೆ ಆಕ್ಸ್‌ಫರ್ಡ್ ಶಬ್ದಕೋಶವೂ ಸೆಲ್ಫೀ ಎನ್ನುವ ಪದವನ್ನು ಸೇರಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಮನೋ ತಜ್ಞರು ಹೊಸ ವ್ಯಾಖ್ಯಾನಗಳನ್ನು ನೀಡುತ್ತಿದ್ದಾರೆ.

## ಸೆಲ್ಫೀಗಳ ಮಿತಿ

ಮಾನಸಿಕವಾಗಿ ಹೇಳಬೇಕೆಂದರೆ, ಕಾಲ ಬದಲಾಗಿದ್ದರೂ ಸ್ಥಿತಿ ಬದಲಾಗಿಲ್ಲ. ಯುವಜನರು ಸೆಲ್ಫೀಗಳಿಲ್ಲದೆ ಬದುಕು ಇಲ್ಲ ಎಂಬ ಪರಿಸ್ಥಿತಿಯನ್ನು ತಲುಪಿದ್ದಾರೆ. 'ಅವಳ ಬಳಿ 5000 ಸೆಲ್ಫೀಗಳಿವೆ, ನನ್ನ ಬಳಿ 500 ಕೂಡಾ ಇಲ್ಲ' ಎನ್ನುವ ಸ್ಪರ್ಧೆ ಇಲ್ಲಿಯೂ ಬೆಳೆಯುತ್ತಿದೆ.

ಸಾಮಾಜಿಕ ತಾಣಗಳ ಪೈಪೋಟಿ ವೈಯಕ್ತಿಕ ಬದುಕಿಗೂ ಹರಡಿದೆ. ಸಾರ್ಥಕತೆ, ದುಗುಡಗಳು, ಪೈಪೋಟಿ, ಹೆಚ್ಚು ಜನರಿಂದ ಗುರುತಿಸಿಕೊಳ್ಳುವ ತವಕ, ಇನ್ನೊಬ್ಬರ ಮೇಲಿನ ಮತ್ಸರ, ಸ್ಪರ್ಧೆಗಳು ಹೊಸ ಆಯಾಮವನ್ನು ಪಡೆದುಕೊಂಡಿವೆ.

ಈ ಮಾಧ್ಯಮಗಳಲ್ಲಿ ಜನರು ವ್ಯಯಿಸುತ್ತಿರುವ ಕಾಲವೂ ಅತ್ಯಂತ ಹೆಚ್ಚು! ವಿದ್ಯಾರ್ಥಿಯಾಗಿ ಕಲಿಯುವ ಸಮಯದಲ್ಲಿ ಈ ರೀತಿ ಸಮಯವನ್ನು ವ್ಯರ್ಥ ಮಾಡಿದರೆ ಗುರಿಯೇ ಮಸುಕಾಗಿಬಿಡುವುದು ಅಪಾಯಕಾರಿ. ಸೆಲ್ಫೀಗಳು ಒಂದೆಡೆ ತರುವ ಆತ್ಮ ತೃಪ್ತಿ ಮಿತಿಮೀರಿದ ಆಕಾಂಕ್ಷೆಗಳಿಂದ ಮಸುಕಾದಲ್ಲಿ ಅತೃಪ್ತಿಯಾಗಿ ಮಾರ್ಪಾಡು ಆಗಬಹುದು. ಮರಣಗಳು, ಅಪಘಾತಗಳ ಸಂಖ್ಯೆ ಯನ್ನು ಗಮನಿಸಿದರೆ ಸೆಲ್ಫೀಗಳನ್ನು ತೆಗೆದುಕೊಳ್ಳುವ ಜನರು ಹುಂಬರೆಂದು ನಂಬುವ ಇತರರ ದೃಷ್ಟಿಕೋನಕ್ಕೆ ಮೊನಚು ದೊರೆಯುತ್ತದೆ.

ತಮ್ಮ ವಿಚಿತ್ರ ದಾಹದ ಉಡುಪುಗಳನ್ನು ಖರೀದಿಸಿ, ಉಟ್ಟು, ಸೆಲ್ಫೀಗಳನ್ನು ತೆಗೆದುಕೊಂಡು ಪೋಸ್ಟ್ ಮಾಡಿದರೂ, ಸಮಾಜದಲ್ಲಿ ಅವುಗಳನ್ನು ತೊಟ್ಟು ಬದುಕಲು ಆಗದವರಿದ್ದಾರೆ. ಅವರ ತಾರಾ ಬದುಕಿನ ಕಲ್ಪನೆಗಳು, ಆಸೆಗಳು ಇವುಗಳ ಮೂಲಕ ಹೊರಹೊಮ್ಮಬಹುದು. ತಮ್ಮ ಘನತೆಯನ್ನು ಏರಿಸಿಕೊಳ್ಳಲೆಂದೇ ಸೆಲ್ಫೀಗಳನ್ನು ಪೋಸ್ಟ್ ಮಾಡುವವರು ಇದ್ದಾರೆ. ಇನ್ನೊಬ್ಬರ ಸಹಾಯವಿಲ್ಲದೆ ಸೆಲ್ಫೀ ತೆಗೆದುಕೊಳ್ಳುವ ಕಾರಣ ಒಮ್ಮೊಮ್ಮೆ ಜನರ ಗುರುತಿನ ಜೊತೆಗೆ ಅವರ ಒಳಗಿನ ವ್ಯಕ್ತಿಯ ಗುರುತನ್ನು ಕೂಡ ಸೆಲ್ಫೀಗಳು ಒದಗಿಸಿಬಿಡುತ್ತವೆ.

ಪ್ರತಿ ಲೈಕುಗಳಿಗೆ ಇನ್ನೊಂದು ಲೈಕನ್ನು ಬೇಡುವ ಮಾನಸಿಕ ಸ್ಥಿತಿಯ ಚಕ್ರದಲ್ಲೂ ಯುವಜನತೆಯನ್ನು ಈ ಸೆಲ್ಫೀ ಮೋಹ ಸಿಲುಕಿಸಿದೆ. ಸೆಲ್ಫೀಗಳ ಹುಚ್ಚನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವುದು ಅತಿಮುಖ್ಯ. ಇಲ್ಲದಿದ್ದಲ್ಲಿ ಜೀವನದ ಹಲವು ದುರಂತಗಳಿಗೆ, ಹಲವರ ನಿಂದನೆಗಳಿಗೆ, ನಿರಾಕರಣೆಗೆ ಕೂಡ ಜನರನ್ನು ಇವು ಸಿಕ್ಕಿಸಬಲ್ಲವು.

ಸೆಲ್ಫೀ ಗಳ ಹಿಂದಿರುವ ಮನೋಧರ್ಮ ಆತ್ಮತೃಪ್ತಿ ಎಂದರೆ ಸುಳ್ಳಾಗಲಾರದು. ಎಲ್ಲಕ್ಕಿಂತ ಹೆಚ್ಚಾಗಿ, ಮನೆಯವರನ್ನು ಹೊರತುಪಡಿಸಿ, ಬೇರೆಯವರು ಭೇಷ್ ಎಂದಾರೆಯೇ ಎಂಬ ಕುತೂಹಲದ ತಣಿಸುವಿಕೆ. ಜನರಿಂದ ಸಿಗುವ ಅಂಗೀಕಾರದ ತೃಪ್ತಿ. ಹಲವರ ಗಮನವನ್ನು ಸೆಳೆದ ಸಾರ್ಥಕತೆ.

ಸೆಲ್ಫೀ ಮೋಹವನ್ನು ಹದ್ದುಬಸ್ತಿನಲ್ಲಿ ಇಡಲು ನಿಯಮಗಳನ್ನು ಬಳಸಬಹುದೆ? ಇದು ಕಾನೂನಿಗ ವ್ಯಾಪ್ತಿಗೆ ಒಳಪಡುವುದು ಹೇಗೆ? ಸ್ವಯಂನಿಯಂತ್ರಣವೇ ಇದಕ್ಕೆ ಸೂಕ್ತ ಔಷಧಿಯೆ? ಇನ್ನಷ್ಟು ಚರ್ಚೆ ನಡೆಸಬಹುದು.

